## ವೈರಾಗ್ಯಶಾಲಿ ತಿಮ್ಮಣ್ಣದಾಸರಿಂದ ವಿರಚಿತ ಶ್ರೀ ವಿಜಯದಾಸರ ನಮನ

ವಿಜಯರಾಜ ಗುರುರಾಜಾಧಿರಾಜ ಮಹ-
ರಾಜ ಶಿರೋರತುನ || ಪ ||
ತ್ಯಜಿಸದೆ ನಿಮ್ಮ ಪದಾಂಬುಜವ ಬಿಡನೆಂಬೋ
ಸುಜನರ ಪಾಲಿಸಯ್ಯ || ಅ. ಪ ||

ಜ್ಞಾನಭಕುತಿ ಕೊಡು ಗಾನಶೀಲನ ಮಾಡು
ಹೀನಮನವ ಕೆಡಿಸೋ
ನಾನೆಂಬೊ ಅಹಂಕಾರವನ್ನ ತೊಲಗಿಸೋ
ನಿನ್ನವರವನೆನಿಸೋ
ಧೇನಿಸುವಂದದಿ ಹರಿಯಪದಾಂಬುಜವ
ಮಾನಸದಲಿ ಸರ್ವದಾ
ಕಾಣಿಸಿಕೊಡು ನಾನು ಜೀವನು ನಿಜವೆಂಬೊ
ಜ್ಞಾನ ಮನಕೆ ಬರಲಿ || ೧ ||

ಮೌನವಾಗಿರಲಾರು ಹೀನತಿನುಡಿಯಲು
ಪ್ರಾಣಪ್ರೇರಕರಿಂದಲಿ
ಆನೇನಾಡುವುದೆಲ್ಲ ಆನೆ ಎನ್ನುವೆನೆಲ್ಲ
ಆನೆ ಸ್ವತಂತ್ರನಲ್ಲ
ದೀನನಾಗೆರಗಿ ಸಜ್ಜನರ ಪದಾಬ್ಜಕ್ಕೆ
ರೇಣುವಾಗಿ ನಡೆದು
ನೀನೇ ಗತಿಯೆಂದು ನಿನ್ನ ಮೊರೆ ಹೊಕ್ಕನೊ
ಕ್ಷೀಣಿಯೊಳಗೆ ಬಳಲಿ || ೨ ||

ನಿಮ್ಮ ಕೊಂಡಾಡುವ ಬುಧರು ಕಾಣಲು ಅವ-

ರೆಮ್ಮಾಪ್ತನೆಂದೆನಲಿ

ನಿಮ್ಮ ಪುಣ್ಯದ ಪುತ್ರ ಗೋಪಾಲದಾಸರು

ನಮ್ಮ ರಕ್ಷಕರಾಗಲಿ

ಇಮ್ಮಹಿಯೊಳಗೇಸುಕಾಲವಾದರೂ ಪುಣ್ಯ-

ಸಂಬಂಧ ಕೆಡೆದಿರಲಿ

ಸುಮ್ಮನಸರೀಶ ರಘುಪತಿ ವಿಠಲ

ನಮ್ಮ ಸ್ವಾಮಿಯಾಗಲಿ || ೩ ||

Contributed by Vidya VishnuKiran, Bangalore

---